**ಓ.ಎಸ್. – 17/2018**

**ಪಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 06.12.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎನ್.ಎಂ. ವಕೀಲರಿಂದ**

1. ದಾವಾ ಸ್ವತ್ತು ಕಾರ್ಗಲ್ ಗ್ರಾಮದ ಸರ್ವೇ ಸಂಖ್ಯೆ 14 ರಲ್ಲಿ ಬರುತ್ತದೆ. ಈಗ ಪೋಡಿ ಆಗಿ ಸದರಿ ಸರ್ವೇ ಸಂಖ್ಯೆ 16 ಆಗಿರುತ್ತದೆ. ದಾವಾ ಸ್ವತ್ತಿನಲ್ಲಿ ಪ್ರಸ್ತುತ ಪೂರ್ಣ ನಿರ್ಮಾಣಗೊಂಡಿರುವ ಚರ್ಚ್ ಇದ್ದು, ಅದರಲ್ಲಿ 4 ವರ್ಷಗಳಿಂದ ಸಾಂಪ್ರಾದಾಯಿಕ ಪ್ರಾರ್ಥನೆಗಳು ನಡೆಯುತ್ತಿವೆ ಎಂದರೆ ಸರಿಯಲ್ಲ. ಚರ್ಚ್ ಗೆ ಸಂಬಂಧಿಸಿದಂತೆ ಚರ್ಚ್ ನ ಫಾದರ್ ಕಾರ್ಗಲ್ ಪಟ್ಟಣ ಪಂಚಾಯಿತಿಗೆ ನಿರಂತರವಾಗಿ ಕಂದಾಯವನ್ನು ಪಾವತಿಸುತ್ತಾ ಬರುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಇಂತಹದೇ ಸ್ಥಳದಲ್ಲಿ ಬರುತ್ತದೆ ಎಂದು ತೋರಿಸಲು ನಕಾಶೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

2. ನಿಪಿ 6 ರ ಆದೇಶದಲ್ಲಿ ಸರ್ವೇ ಸಂಖ್ಯೆ 16 ಕೆ.ಪಿ.ಸಿ.ಎಲ್. ಗೆ ಸೇರಿದ್ದಲ್ಲ, ಮೀಸಲು ಅರಣ್ಯ ಪ್ರದೇಶವೆಂದು ಆದೇಶದಲ್ಲಿ ತಿಳಿಸಿಲಾಗಿರುತ್ತದೆ ಎಂದರೆ ಸರಿಯಲ್ಲ. ಮೀಸಲು ಅರಣ್ಯ ಪ್ರದೇಶದ ಭಾಗವನ್ನು ಪಡೆಯಬೇಕಾದರೆ ಸಂಸ್ಥೆ ಅಥವಾ ವ್ಯಕ್ತಿ ಅಥವಾ ಸರ್ಕಾರ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಬೇಕೆಂದರೆ ಸಾಕ್ಷಿಯು ಮೈಸೂರು ಮಹಾರಾಜರ ಕಾಲದಲ್ಲಿ 720 ಎಕರೆ ಪ್ರದೇಶವನ್ನು 999 ವರ್ಷಗಳಿಗೆ ಲೀಜ್ ಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಸರ್ಕಾರವು ಸಹ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಸರ್ವೇ ಸಂಖ್ಯೆ 16 ರ ಸ್ವತ್ತನ್ನು ತನ್ನ ವಶಕ್ಕೆ ಪಡೆದಿರುವುದಿಲ್ಲ ಮತ್ತು ನಮಗೆ ಸರ್ವೇ ಸಂಖ್ಯೆ 16 ರ ಸ್ವತ್ತಿನ ಮೇಲೆ ಯಾವುದೇ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ.

3. ಮೀಸಲು ಅರಣ್ಯ ಮತ್ತು ಕೆ.ಪಿ.ಸಿ.ಎಲ್. ಗೆ ಕಾಯ್ದಿರಿಸಿರುವ ಪ್ರದೇಶ ಯಾವುದು ಎಂದು ತೋರಿಸುವ ಪೋಡಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ತಾನು ದಾಖಲೆಗಳನ್ನು ಪರಿಶೀಲಿಸಬೇಕೆಂದು ತಿಳಿಸಿ ದಾಖಲೆಗಳು ಇರುವುದಿಲ್ಲವೆಂದು ದಾಖಲೆಗಳನ್ನು ನೋಡಿ ತಿಳಿಸಿರುತ್ತಾರೆ.

ದಾವಾ ಸ್ವತ್ತು ಮೀಸಲು ಅರಣ್ಯ ಪ್ರದೇಶದಲ್ಲಿ ಬರುತ್ತದೆಯೋ ಅಥವಾ ಕೆ.ಪಿ.ಸಿ.ಎಲ್.ಗೆ ಕಾಯ್ದಿರಿಸಿರುವ ಪ್ರದೇಶದಲ್ಲಿ ಬರುತ್ತದೆಯೋ ಎಂದು ತೋರಿಸುವ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಕಾಶೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ ಸುಮಾರು 22.5 X 62 ಮೀಟರ್ ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ – ರಸ್ತೆ, ದಕ್ಷಿಣಕ್ಕೆ –ನಾಲಾ, ಪೂರ್ವಕ್ಕೆ – ಸರ್ವೇ ಸಂಖ್ಯೆ 16 ಮತ್ತು ಪಶ್ಚಿಮಕ್ಕೆ – ಸರ್ವೇ ಸಂಖ್ಯೆ 16 ರ ಉಳಿದ ಜಾಗ ಬರುತ್ತದೆ.

4. ದಾವಾ ಸ್ವತ್ತಿನ ಬಳಿ ಪೊಲೀಸ್ ಠಾಣೆ, ಆಸ್ಪತ್ರೆ, ಕೆಲವು ಸಾವಿರ ಜನರು ವಾಸಿಸುತ್ತಿರುವ ಮನೆಗಳು ಮತ್ತು ಜೋಗ ಅಭಿವೃದ್ಧಿ ಪ್ರಾಧಿಕಾರದವರು ನಿರ್ಮಾಣ ಮಾಡುತ್ತಿರುವ ಬಹು ವೆಚ್ಚದ ಕಟ್ಟಡಗಳು ಇರುತ್ತವೆ ಎಂದರೆ ಸಾಕ್ಷಿಯು ಪೊಲೀಸ್ ಠಾಣೆ, ಆಸ್ಪತ್ರೆ, ಮನೆಗಳು ಮತ್ತು ಬಹುವೆಚ್ಚದ ಕಟ್ಟಡಗಳು ನಮ್ಮ ಸ್ವತ್ತಿನ ವ್ಯಾಪ್ತಿಗೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಕೆ.ಪಿ.ಸಿ.ಎಲ್.ಗೆ ಕಾಯ್ದಿರಿಸಿರುವ 720 ಎಕರೆ ಪ್ರದೇಶವು ಇಂತಹದೇ ಸ್ಥಳದಲ್ಲಿ ಬರುತ್ತದೆ ಎಂದು ತೋರಿಸುವ ಚತುರ್ಗಡಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ದಾಖಲೆಗಳನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಸರ್ವೇ ಸಂಖ್ಯೆ 16 ರ ಪೋಡಿ ಆಗಿರುವುದಿಲ್ಲ. ಪೋಡಿ ಆಗುವವರೆಗೂ ಸ್ವತ್ತನ್ನು ನಿಶ್ಚಿತವಾಗಿ ಗುರುತಿಸಲು ಆಗುವುದಿಲ್ಲ ಎಂದರೆ ಸಾಕ್ಷಿಯು ಪೋಡಿ ಮಾಡಿಕೊಡಿ ಎಂದು ನಾವು ತಹಶೀಲ್ದಾರ್ ರವರಿಗೆ ಅರ್ಜಿಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಉಪವಿಭಾಗಾಧಿಕಾರಿಗಳು 2011 ರಲ್ಲಿ ಆದೇಶ ಮಾಡಿದ ನಂತರ ನಾವು ಪೋಡಿಗೆ ಅರ್ಜಿಯನ್ನು ನೀಡಿ ಪೋಡಿಗೆ ಪ್ರಯತ್ನಿಸುತ್ತಿದ್ದೇವೆ, ಆದರೆ ತಹಶೀಲ್ದಾರ್ ರವರಿಂದ ಯಾವುದೇ ಸ್ಪಂದನೆ ದೊರೆತಿರುವುದಿಲ್ಲ.

5. ದಾವಾ ಸ್ವತ್ತಿನಲ್ಲಿ ಪೂರ್ಣ ಪ್ರಮಾಣದ ಚರ್ಚ್ ಇದೆಯೋ ಇಲ್ಲವೋ ಎಂದು ತಿಳಿಯಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ನನ್ನದು ಯಾವುದೇ ವಿರೋಧ ಇರುವುದಿಲ್ಲ. ದಾವಾ ಸ್ವತ್ತು ಖರಾಬ್ ಜಾಗದಲ್ಲಿ ಬರುತ್ತದೆಯೋ ಅಥವಾ ಖಾತಾ ಜಾಗದಲ್ಲಿ ಬರುತ್ತದೆಯೋ ಎಂದು ತಿಳಿದುಕೊಂಡಿದ್ದೀರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೆ.ಪಿ.ಸಿ.ಎಲ್. ಜಾಗದಲ್ಲಿ

ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸುತ್ತಲೂ ನಮ್ಮ ಕೆ.ಪಿ.ಸಿ.ಎಲ್. ನ ಕಚೇರಿ ಮತ್ತು ವಸತಿ ಗೃಹಗಳು ಇರುತ್ತವೆ, ಆ ಆಧಾರದ ಮೇಲೆ ನಾನು ಗುರುತಿಸಿ ಹೇಳುತ್ತಿದ್ದೇನೆ.

**ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ